ಸದರೀ ದರಖಾಸ್ತುದಾರರಾದ ಮಾದಮ್ಮನವರ ಅರ್ಜೀಯನ್ನು 1887ನೇ ಇಸವಿ ಜೂರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಮ್ಮ ವುರಫ್ ಲಿಂಗಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 207.

ಮೃತಪಟ್ಟ ಬೋರೆಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಜೋಗಿಗೌಡರು, ಮೃತಪಟ್ಟ ಸದರೀ ಬೋರೆಗೌಡರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಜಟ್ಟಿಹುಂಡಿ ಸ್ಥಳದ ಸದರೀ ಜೋಗಿಗೌಡರು ಸದರೀ ವಾಸಸ್ಥರಾಗಿ ಮೃತಪಟ್ಟ ಬೋರೆಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜೋಗಿಗೌಡರ ಅರ್ಜಿಯನ್ನು 1887ನೇ ಇಸವಿ ಜೂರ್ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೋರೆಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 211.

ಮೃತಪಟ್ಟ ವಿೂನಾಕ್ಷಮ್ಮನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವೆಂಕಟಾಚಲಶಾಸ್ತ್ರಿಗಳು ಮೃತಪಟ್ಟ ಸದರೀ ವಿೂನಾಕ್ಷಮ್ಮನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಶ್ರೀರಾಂಪೇಟೆ ಸ್ಥಳದ ಸದರೀ ವೆಂಕಟಾಚಲಶಾಸ್ತ್ರಿಗಳು ಕಸಬಾ ತಿರುಮಕೂಡ್ಲು ವಾಸಸ್ಥರಾಗಿ ಮೃತಪಟ್ಟ ವಿೂನಾಕ್ಷಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 30 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಾಚಲಶಾಸ್ತ್ರಿಗಳ ಅರ್ಜಿಯನ್ನು 1887ನೇ ಇಸವಿ ಜೂರ್ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಿೂನಾಕ್ಷಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಏಪ್ರೆಲ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ವೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ನಂ. 2. ತಾರೀಖು 13ನೇ ಮೇ 1887.

ಚಾಮರಾಜನಗರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜನ್ನು ಕ್ರಮವಾದ ವಾರೆಸ್‌ದಾರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲೀ ಈ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷ್ ಆಕ್ಟ್ಯು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜನ್ನು ಬರದುಕೊಟ್ಟವರ ಹೆಸರು ಅಡಿಷನ್ ಸಹ.	ಬರಸಿಕೊಂಡವರ ಹೆಸರು ಅಡಿಷನ್ ಸಹ.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಾದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
71 1885—86	ನಾಗವಳ್ಳಿ ಗ್ರಾಮದಲ್ಲಿ ಇರುವ ಕ್ಯಾನುಭಾಗ ಸುಬ್ಬರಾಯರ ಮಗ ಸುಬ್ಬರಾಯ	ನಾಗವಳ್ಳಿ ಗ್ರಾಮದಲ್ಲಿ ಇರುವ ವುಪಲಿಗರ ಜಾತಿ ಕುಳ್ಳಂಕನಮಗ ಮಾರಾ	8—5—85	9—5—85	(30) ರೂಪಾಯಿ ಕಿಮ್ಮತ್ತಿನ ಭೂಮಿ ಶುದ್ಧ ಕ್ರಯ ಪತ್ರ.

ಹೆಚ್. ನಂಜುಂಡರಾಜ್ ಅರಸು,
ಫೌರ್ ರಿಜಿಸ್ಟ್ರಾರ್.